ಈ) ಲೋಕೋಪಯೋಗಿ ಇಲಾಖೆಯವರು ಈ ರಸ್ತೆಗಳ ದುರಸ್ತಿಗೆ ಹೊಂದಿರುವ ಜವಾಬ್ದಾರಿಯೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ಪ್ಯಾಕೇಜಿಂಗ್ ಗುತ್ತಿಗೆಯಲ್ಲಿ ರಸ್ತೆಗಳ ಅಗಲೀಕರಣ ಮತ್ತು ಬಲಪಡಿಸುವ ಕಾರ್ಯವನ್ನು ತೆಗೆದುಕೊಂಡಿದ್ದು, ಈ ಕಾಮಗಾರಿಗಳು ಪೂರ್ಣಗೊಂಡ ನಂತರ 1 ವರ್ಷ ಕಾಲ ಕಾಮಗಾರಿಗಳಲ್ಲಿ ಕಂಡು ಬಂದ ದೋಷಗಳನ್ನು ಸರಿಪಡಿಸುವುದು ಮತ್ತು ಮುಂದೆ ಎರಡು ವರ್ಷ ರಸ್ತೆಯ ನಿರ್ವಹಣೆ ಮಾಡುವುದನ್ನು ನಿಗಧಿಪಡಿಸಲಾಗಿದೆ. ವಿಶ್ವಬ್ಯಾಂಕ್ ನೆರವಿನ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿಯಲ್ಲಿ ಪ್ಯಾಕೇಜ್ ಗುತ್ತಿಗೆಯಡಿ ನಿರ್ಮಾಣ ಮಾಡಿದ ರಸ್ತೆಯ ನಿರ್ವಹಣೆಗೆ ನಿಗಧಿಪಡಿಸಲಾದ ಅವಧಿಯು "ನಿರ್ಮಾಣ ಹಂತ ಮುಗಿದ ಬಗ್ಗೆ ದೃಢೀಕರಿಸಿದ ದಿನಾಂಕದಿಂದ ನಿರ್ವಹಣಾ ಅವಧಿಯು 1 ವರ್ಷ".

ಆ) ಶ್ರೀರಂಗಪಟ್ಟಣ ಬೀದರ್ ರಸ್ತೆಯ ಭಾಗವಾದ ಕಿಬ್ಬನಹಳ್ಳಿ ಕ್ರಾಸ್‌ನಿಂದ ಹುಳಿಯಾರ ಪುನ:ಶ್ಚೇತನ ರಸ್ತೆ (ಚಿಕ್ಕನಾಯಕನಹಳ್ಳಿ ಭಾಗವು ಸೇರಿರುವಂತೆ) ಪ್ಯಾಕೇಜಿನ ಗುತ್ತಿಗೆದಾರರು ಮೆ: ನ್ಯಾಷನಲ್ ಆಸ್‌ಫಾಲ್ಟ್ ಪ್ರಾಡಕ್ಟ್ ಅಂಡ್ ಕನ್‌ಸ್ಟ್ರಕ್ಷನ್ ಕಂಪನಿ, ಚೆನ್ನೈ

ಇ) ಪ್ಯಾಕೇಜ್ ಅಡಿಯಲ್ಲಿ ನಿಗಧಿಪಡಿಸಲಾದ ನಿರ್ವಹಣಾ ಅವಧಿಯಲ್ಲಿ ಆಗುವ ಗುಂಡಿಗಳನ್ನು ಮುಚ್ಚುವುದು ಪ್ಯಾಕೇಜಿನ ಗುತ್ತಿಗೆದಾರರ ಜವಾಬ್ದಾರಿ ಆಗಿದೆ.

ಈ) ಪ್ಯಾಕೇಜಿನ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆ ಅವಧಿಯು ಮುಗಿದ ನಂತರ, ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲಾಗುವುದು. ತದನಂತರ, ಈ ರಸ್ತೆಗಳ ದುರಸ್ತಿ ಸಂಬಂಧಿತ ಎಲ್ಲಾ ಜವಾಬ್ದಾರಿಯು ಲೋಕೋಪಯೋಗಿ ಇಲಾಖೆಗೆ ಒಳಪಡುತ್ತದೆ.

587(725) : ಶ್ರೀ ಮಲ್ಲಿಕಾರ್ಜುನ್ ಸಿದ್ದರಾಮಪ್ಪ ಖೂಬಾ (ಬಸವಕಲ್ಯಾಣ)

ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಸವಕಲ್ಯಾಣ ಮತಕ್ಷೇತ್ರದಲ್ಲಿ ಬರುವ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು;

ಆ) ಈ ಪೈಕಿ ಎಷ್ಟು ಕೆರೆಗಳಲ್ಲಿ ನೀರಿದೆ ಹಾಗೂ ಎಷ್ಟು ಕೆರೆಗಳು ಬತ್ತಿ ಹೋಗಿವೆ;

ಇ) ಈ ಕೆರೆಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಈ ಮತಕ್ಷೇತ್ರದಲ್ಲಿ ಯಾವ ಯಾವ ಗ್ರಾಮಗಳಲ್ಲಿ ಹೊಸ ಕೆರೆಗಳನ್ನು ನಿರ್ಮಿಸುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಮುಂದಿದೆ;

ಊ) ಈ ನಿರ್ಮಾಣ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಋ) ಇದಕ್ಕೆ ಅಗತ್ಯವಿರುವ ಹಣಕಾಸಿನ ವಿವರಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) 11 ಕೆರೆಗಳಿವೆ.

ಆ) 9 ಕೆರೆಗಳಲ್ಲಿ ನೀರಿದೆ. 2 ಕೆರೆಗಳು ಬತ್ತಿವೆ.

ಇ) ನಾರಾಯಣಪುರ ಕೆರೆ, ಬೆಟಬಾಲಕುಂದಾ ಕೆರೆ ಮತ್ತು ಕಲಖೋರಾ ಕೆರೆಗಳನ್ನು ರೈತ ಕಾಯಕ ಕೆರೆ ಯೋಜನೆಯಡಿ ಪುನರುಜ್ಜೀವನಗೊಳಿಸಲಾಗಿದೆ.

ಈ) 515.00 ಲಕ್ಷ ರೂ.ಗಳ ಅಂದಾಜಿನ ಸೈದಾಪುರ ಕೆರೆ, 29.90 ಲಕ್ಷ ರೂ.ಗಳ ಅಂದಾಜಿನ ಹಿರೆನಾಗಾಂ ಇಂಗುಕೆರೆ ಪ್ರಗತಿಯಲ್ಲಿವೆ, 26.00 ಲಕ್ಷ ರೂ.ಗಳ ಅಂದಾಜಿನ ಕಲಖೋರಾ ತಾಂಡಾ ಇಂಗುಕೆರೆ ಮತ್ತು 29.90 ಲಕ್ಷ ರೂ.ಗಳ ಹಾರಕುಡ ತಾಂಡಾ ಇಂಗುಕೆರೆಗಳ ನಿರ್ವಹಣೆಗಾಗಿ ಗುತ್ತಿಗೆದಾರರನ್ನು ನೇಮಿಸಲಾಗಿದೆ.

ಉ) ಅನುದಾನದ ಲಭ್ಯತೆ ಮೇಲೆ ಕ್ರಮ ಜರುಗಿಸಲಾಗುವುದು.

ಊ) 'ಈ' ನಲ್ಲಿ ಉತ್ತರಿಸಿದಂತೆ.

588(727) : ಶ್ರೀ ಮಲ್ಲಿಕಾರ್ಜುನ್ ಸಿದ್ದರಾಮಪ್ಪ ಖೂಬ (ಬಸವಕಲ್ಯಾಣ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಸವಕಲ್ಯಾಣ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ 25 ಕೆ.ವಿ.ಯ ಒಂದು ಟ್ರಾನ್ಸ್‌ಫಾರ್ಮರ್, 63 ಕೆ.ವಿ.ಯ ಎಂಟು ಟ್ರಾನ್ಸ್‌ಫಾರ್ಮರ್‌ಗಳು. 100 ಕೆ.ವಿ.ಯ 21 ಟ್ರಾನ್ಸ್‌ಫಾರ್ಮರ್‌ಗಳು ಮತ್ತು 250 ಕೆ.ವಿ.ಯ ಎರಡು ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿರುವ ವಿಷಯ ಸರ್ಕಾರಕ್ಕೆ ತಿಳಿದಿದೆಯೇ;

ಆ) ಹಾಗಿದ್ದಲ್ಲಿ, ಈ ಟ್ರಾನ್ಸ್‌ಫಾರ್ಮರ್‌ಗಳನ್ನು ತುರ್ತಾಗಿ ದುರಸ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿರುವುದರಿಂದ ರೈತರ ಹೊಲಗದ್ದೆಗಳಿಗೆ ಹಾಗೂ ಜನರಿಗೆ ಕುಡಿಯುವ ನೀರಿನ ಸರಬರಾಜಿನಲ್ಲಿ ತೀವ್ರ ಸಮಸ್ಯೆಯಾಗಿರುವುದರಿಂದ ಸರ್ಕಾರವು ತೀವ್ರಗತಿಯಲ್ಲಿ ಈ ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ತಿ ಮಾಡಲು ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು.

ಆ) ದಿನಾಂಕ 23-7-2004ರಲ್ಲಿದ್ದಂತೆ 3 ಸಂಖ್ಯೆಯ 63 ಕೆ.ವಿ.ಎ. 4 ಸಂಖ್ಯೆಯ 100 ಕೆ.ವಿ.ಎ ಮತ್ತು ಒಂದು 25 ಕೆ.ವಿ.ಎ. ಸಾಮರ್ಥ್ಯದ ಪರಿವರ್ತಕಗಳನ್ನು ದುರಸ್ತಿಗೊಳಿಸಿ, ಅಳವಡಿಸಲಾಗಿದೆ, ಸುಟ್ಟು ಹೋದ ಬಾಕಿ ಪರಿವರ್ತಕಗಳ ದುರಸ್ತಿಗಾಗಿ ಸೂಕ್ತ ಜರೂರು ಕ್ರಮಗಳನ್ನು ಕೈಗೊಳ್ಳಲಾಗಿದೆ.

ಇ) ಹೌದು ದುರಸ್ತಿಯಲ್ಲಿರುವ / ಸುಟ್ಟು ಹೋಗಿರುವ ಪರಿವರ್ತಕಗಳನ್ನು ಸರಿಪಡಿಸಲು / ಬದಲಾಯಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ.